# ಪ್ರಾರ್ಥನೆ

( ಪುರಂದರದಾಸರ ಉಗಾಭೋಗಗಳಿಂದ )

ಒಡವರೊಳಗೆ ಎನ್ನಿಂದಾರು ಬಡವರಿಲ್ಲ
ಕೊಡುವರೊಳಗೆ ನಿನ್ನಿಂದಾರು ಕೊಡುವರಿಲ್ಲ
ದೃಢಭಕ್ತಿ ಎನಗೆ ನಿನ್ನಲ್ಲಿ ಕಲ್ಪಿಸಿ
ಬಿಡದೆ ಸಲಹಯ್ಯ ಶ್ರೀ ಪುರಂದರ ವಿಠಲ

ಎರಗಿ ಭಜಿಪೆನು ನಿನ್ನ ಚರಣಸನ್ನಿಧಿಗೆ
ಕರುಣದಿಂದಲಿ ನಿನ್ನ ಸ್ಮರಣೆಯನು ಎನಗಿತ್ತು
ಮರೆಯದಲೆ ಸಲಹೋ ಶ್ರೀ ಪುರಂದರ ವಿಠಲ

ಕಿಚ್ಚಿನೊಳಗೆ ಬಿದ್ದ ಕೀಟಕನು ನಾನಯ್ಯ
ಅಚ್ಯುತನೆ ಕಾಯೋ ಅನಂತನೆ ತೆಗೆಯೊ
ಗೋವಿಂದ ಹರಿ ಪೊರೆಯೊ ಪುರಂದರ ವಿಠಲ
ನೀ ಕರುಣವುಳ್ಳವನು ಕಾಣೋ

ಪ್ರಪನ್ನ ರಕ್ಷಕ ನೀನು
ಪಾಲಿಸು ನಿನ್ನವ ನಾನು
ಉಪಸಾಧನವರಿಯೆನೋ, ಒಮ್ಮೆ ನಿನ್ನ ನೆನೆವೆನು
ಅಪರಾಧಿ ನಾನಾದಡೇನು ಅಭಯಪ್ರದನು ನೀನು
ವಿಪರೀತ ಮಾಡದೆನ್ನನು ಸಲಹೋ ಪುರಂದರ ವಿಠಲ
ನಂಬಿಹೆನೊ ನಿನ್ನನು

ಕಾವ ದೈವವು ನೀನೆ ಕೊಲುವ ದೈವವು ನೀನೆ
ಕೈವಲ್ಯ ಫಲದಾಯಕ ಕೇಶವನು ನೀನೆ
ಆವ ದೈವಕ್ಕು ಈ ವೈಭವವ ನಾ ಕಾಣೆ
ರಾವಣಾಂತಕ ಸ್ವಾಮಿ ಪುರಂದರ ವಿಠಲ

ಹರಿ ನೀನು ಮುನಿದರೆ ಆರು ಒಲಿದೇನು ಮಾಡುವರು
ಹರಿ ನೀನು ಒಲಿದರೆ ಆರು ಮುನಿದೇನು ಮಾಡುವರೊ
ಪುರಂದರ ವಿಠಲ

ನಿನ್ನನ್ನೆ ಪಾಡುವೆ ನಿನ್ನನ್ನೆ ಪೊಗಳುವೆ
ನಿನ್ನನ್ನೆ ಬೇಡಿ ಬೇಸರಿಸುವೆ
ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ
ನಿನ್ನ ತೊಂಡರಿಂಗೆ ಕೈಗೊಡುವೆ
ನಿನ್ನಂತೆ ಸಾಕಬಲ್ಲವರಿನ್ನುಂಟೆ
ಘನ್ನ ಪುರಂದರ ವಿಠಲ ದೇವರ ದೇವ

ಆನೆಯನು ಕಾದಾಗ ಜ್ಞಾನವಿದ್ದುದು ಏನು
ನಾನು ವದರಲು ಈಗ ಕೇಳದಿದ್ದುದು ಏನು
ದಾನವಾಂತಕ ಹರಿ ದೀನರಕ್ಷಕನೆಂಬೊ
ಮಾನವುಳಿಸಿಕೊಳ್ಳೊ ಪುರಂದರ ವಿಠಲ

# ಸೂಕ್ತಿ ಪ್ರಭೆ

ಒಂದು ಹಸ್ತ ಯಾವಾಗಲೂ ತೆರೆದಿದ್ದರೆ ಅಥವಾ ಮುಚ್ಚಿಕೊಂಡಿದ್ದರೆ ಅದೊಂದು ಅಂಗವಿಕಲತೆ. ತನ್ನ ರೆಕ್ಕೆಗಳನ್ನು ತೆರೆದು-ಮುಚ್ಚಲಾಗದ ಹಕ್ಕಿ ಹಾರಲಾರದು.

—ಜಲಾಲ್-ಉದ್-ದಿನ್ ರುಮೀ

ಯಾವುದೇ ವಿಷಯದಲ್ಲಾದರೂ ಹತಾಶನಾಗುವುದಕ್ಕಿಂತ ಭರವಸೆಯಿಂದಿರುವುದು ಉತ್ತಮ. —ಗಯಟೆ(Goethe)

ನೀವು ಬಯಸುವ ಕೆಲವು ವಸ್ತುಗಳು ನಿಮಗೆ ದೊರೆಯದೇ ಇರುವುದು ನೀವು ಸುಖದಿಂದ ಇರುವುದಕ್ಕೆ ಅತ್ಯವಶ್ಯಕ.

—ಬರ್ಟ್ರಾಂಡ್ ರಸಲ್ (Bertrand Russel)

ಶಾಂತಿಯ ಸಮಯದಲ್ಲಿ ಅತಿ ಭರವಸೆಯಿಂದ ಇರುವವನು ಯುದ್ಧದ ಸಮಯದಲ್ಲಿ ಖಿನ್ನನೊ ಅಥವಾ ಭೀತನೊ ಆಗಿರುತ್ತಾನೆ.

—ಥಾಮಸ್.ಎ. ಕೆಂಪಿಸ್(Thomas. A. Kempis)

ನಮ್ಮ ಆಲೋಚನೆಗಳಂತೆ ನಾವಿರುತ್ತೇವೆ. ಯಾರ ಮನಸ್ಸು ನಿಃಸ್ವಾರ್ಥ ಆಲೋಚನೆಗಳಿಂದ ರೂಪುಗೊಂಡಿರುತ್ತದೊ ಅವರು ತಮ್ಮ ಮಾತು ಕೃತಿಗಳ ಮೂಲಕ ಆನಂದವನ್ನು ನೀಡುತ್ತಾರೆ. ನೆರಳಿನಂತೆ ಆನಂದ ಅವರನ್ನು ಅನುಸರಿಸುತ್ತದೆ.

—ಭಗವಾನ್ ಬುದ್ಧ

ಪರೋಪದೇಶವೇಲಾಯಾಂ ಶಿಷ್ಟಾಃ ಸರ್ವೇ ಭವಂತಿ ವೈ |
ವಿಸ್ಮರಂತೀಹ ಶಿಷ್ಟತ್ವಂ ಸ್ವಕಾರ್ಯೇ ಸಮುಪಸ್ಥಿತೇ ||

ಇತರರಿಗೆ ಉಪದೇಶ ನೀಡುವ ಸಂದರ್ಭದಲ್ಲಿ ಎಲ್ಲರೂ ಒಳ್ಳೆಯವರಾಗಿರುತ್ತಾರೆ. ಆದರೆ ಸ್ವಾರ್ಥಸಾಧನೆಯ ಸಂದರ್ಭ ಬಂದರೆ ಆ ಒಳ್ಳೆಯತನವನ್ನು ಮರೆತೇಬಿಡುತ್ತಾರೆ!

—ಸುಭಾಷಿತ

ದೇವರು ಮಸೀದಿಯಲ್ಲಿ ವಾಸಿಸಿರುವುದಾದರೆ, ಈ ಜಗತ್ತು ಯಾರ ಪಾಲಿನದು? —ಕಬೀರ್‌ದಾಸ್